# ಶಕ್ತಿ ಕೇಂದ್ರಗಳೂ ಅಹಂಕಾರವೂ..

ಜಗತ್ತಿನ ಶ್ರೇಷ್ಠ ಚಿಂತನೆಗಳು, ಸಿದ್ಧಾಂತಗಳು ಹಾಗೂ ಮತಧರ್ಮಗಳು–ಎಲ್ಲವೂ ಮೂಲತಃ ವ್ಯಕ್ತಿ ಮೂಲದಿಂದಲೇ ಸೃಷ್ಟಿಗೊಂಡಿರುವಂಥವು. ಆ ವ್ಯಕ್ತಿ ನಮ್ಮ ಹಾಗೆ ಸಾಮಾನ್ಯನಾಗಿಯೇ ಜನಿಸಿ ಬೆಳೆದಿರುತ್ತಾನೆ. ಆದರೆ ಅವನು ಸಮಾಜವನ್ನು ಗ್ರಹಿಸುವ, ಸಂವೇದಿಸುವ ಮತ್ತು ವಿಶ್ಲೇಷಿಸುವ ಮನೋಸ್ಥಿತಿ ನಮಗಿಂಥ ಭಿನ್ನವಾಗಿರುತ್ತದೆ. ಈ ಗುಣವನ್ನು ವ್ಯಕ್ತಿ ವಿಶಿಷ್ಟತೆಯೆಂದು ಕರೆಯಬೇಕು. ಈ ವ್ಯಕ್ತಿ ವಿಶಿಷ್ಟತೆಯೆಂಬುದು ಬುದ್ಧಿಮತ್ತೆ ಮತ್ತು ಗ್ರಹಿಕೆಯ ಶಕ್ತಿಯ ಆಧಾರದ ಮೇಲೆ ನಿಂತಿದ್ದು, ಅದೊಂದು ಶಕ್ತಿಯಾಗಿ ಅವನಲ್ಲಿ ಕೆಲಸ ಮಾಡುತ್ತದೆ. ಇತರರಲ್ಲಿ ಇಲ್ಲದ, ಇತರರಿಗಿಂತ ವಿಶೇಷವಾದ ಈ ಶಕ್ತಿಯಿಂದಾಗಿ ಅವನು ಸಹಜವಾಗಿ ಎಲ್ಲರ ಗಮನ ಸೆಳೆಯುವ ವ್ಯಕ್ತಿತ್ವವನ್ನು ರೂಪಿಸಿಕೊಂಡು ಬಿಡುತ್ತಾನೆ. ಸಮಾಜದ ಅಗತ್ಯಗಳನ್ನು, ಅದರ ಜೀವನ ಕ್ರಮವನ್ನು ವಿಶ್ಲೇಷಿಸುವ ಮತ್ತು ಮರು ಮಂಡಿಸುವ ಅವನ ಶಕ್ತಿಯಿಂದಾಗಿ ಅವನ ಸುತ್ತ ಜನಸಮುದಾಯ ಸೇರತೊಡಗುತ್ತದೆ. ಅವನ ಮಾತು, ಸಲಹೆಗಳು ಆ ಸಮುದಾಯಕ್ಕೆ ಆಗಿಂದಾಗ್ಗೆ ಬೇಕಾಗುತ್ತವೆ. ಹೀಗಾಗಿ ಅವನು ಸಮುದಾಯದ ನಡುವೆ ಶಕ್ತಿ ಕೇಂದ್ರವಾಗಿ ಬೆಳೆದುಬಿಡುತ್ತಾನೆ.

ಏಸು, ಬಸವ, ಪೈಗಂಬರ್, ಬುದ್ಧ ಮುಂತಾದವರು ತಮಗಿದ್ದ ಈ ವ್ಯಕ್ತಿ ವಿಶಿಷ್ಟ ಗುಣದಿಂದಲೇ ಮಹಾನ್ ವ್ಯಕ್ತಿ ಶಕ್ತಿಗಳಾಗಿ ರೂಪುಗೊಂಡಿದ್ದು! ತಮ್ಮ ಮಾತುಗಳಿಗೆ ತಲುಪುವ ಶಕ್ತಿಯಿದೆಯೆಂಬುದನ್ನು ಅವರು ಅರ್ಥ ಮಾಡಿಕೊಂಡಿದ್ದರು. ಸಮಾಜವನ್ನು ತಿದ್ದುವ, ಪರಿವರ್ತಿಸುವ, ಸಮಾನತಾ ರೂಪವೊಂದನ್ನು ತರುವ ಆಲೋಚನಾ ವಿಧಾನಗಳು ಅಲ್ಲಿರುತ್ತಿದ್ದವು. ಮುಖ್ಯವಾಗಿ ಇದ್ದ ವ್ಯವಸ್ಥೆಯ ಅಸಮಾನತೆ ಮತ್ತು ಅದರಿಂದಾಗುವ ಕ್ರೌರ್ಯಗಳಿಂದ ರೋಸಿ ಹೋದ ಜನರಿಗೆ ಇಂಥವರ ಮಾತುಗಳು ನಾಳಿನ ಬದುಕಿನ ಆಶಾಕಿರಣಗಳಾಗಿ ಕಂಡಿದ್ದವು. ಆದ್ದರಿಂದ ಅವರನ್ನು ತಮ್ಮ ಸಾಂಸ್ಕೃತಿಕ/ ಧಾರ್ಮಿಕ ನಾಯಕರನ್ನಾಗಿ ಸ್ವೀಕರಿಸಲು ಸಿದ್ಧರಾದರು. ಈ ವ್ಯಕ್ತಿಗಳು ಅಂತರಂಗದಲ್ಲಿ ಅಪಾರ ಕರುಣೆ ಮತ್ತು ಮಾನವ ಪ್ರೇಮವನ್ನು ಹೊಂದಿದ್ದರಿಂದ ತಮಗಿದ್ದ ಸಮುದಾಯ ಬೆಂಬಲವನ್ನು ಸ್ವಾರ್ಥಕ್ಕೆ ಬಳಸಿಕೊಳ್ಳಲಿಲ್ಲ. ಅದರ ಬದಲು ತಮ್ಮತನವನ್ನು ಸಮುದಾಯದ ಹಿತದಲ್ಲಿ ಐಕ್ಯಗೊಳಿಸಿಕೊಂಡರು. ಒಂದು ಸಮುದಾಯದ ಒಳಿತಿಗೆ ಬೇಕಾದ ತಿಳಿವು ಮತ್ತು ನಡೆಯನ್ನು ಬೋಧಿಸಿದರು. ಸಮುದಾಯ ಪ್ರಜ್ಞೆಯನ್ನು ಜಾಗೃತಗೊಳಿಸುವುದರ ಮೂಲಕ ಒಂದು ಹೊಸ ಆಲೋಚನಾ ವಿಧಾನ ಮತ್ತು ಜೀವನ ಕ್ರಮವನ್ನು ಹುಟ್ಟು ಹಾಕಿದರು. ಮುಂದಿನವರು ಅವರ ಬೋಧನೆಯನ್ನು ಮತದ ಹೆಸರಿನಲ್ಲಿ ಕರೆದು ಮಾನ್ಯ ಮಾಡಿದರು. ಅವರು ಮಾತ್ರ ಬದುಕಿನುದ್ದಕ್ಕೂ ಸಾಮಾನ್ಯರ ರೀತಿಯಲ್ಲಿ ಬದುಕು ಸಾಗಿಸಿ, ಅಸಾಮಾನ್ಯ ಚಿಂತನೆಯನ್ನು ನೀಡಿ ಅಸಾಮಾನ್ಯ ವ್ಯಕ್ತಿಗಳಾದರು.

ಈ ಮಹಾನ್ ಶಕ್ತಿವಿಶೇಷಗಳು ಮರೆಯಾದ ಎಷ್ಟೋ ವರ್ಷಗಳ ನಂತರ ಅವರು ನೀಡಿದ ಸಿದ್ಧಾಂತಗಳು ಸಾಂಸ್ಥಿಕ ರೂಪ ಪಡೆದು, ಆ ಸಂಸ್ಥೆಗಳಿಗೆ ಯಜಮಾನರುಗಳು ಸೃಷ್ಟಿಯಾಗುತ್ತಾರೆ. ತಮ್ಮ ಸಾಂಸ್ಥಿಕ ರೂಪದ ಸಿದ್ಧಾಂತವೇ ಸರ್ವ ಶ್ರೇಷ್ಠ, ಅದರಿಂದ ಜಗತ್ತಿನ ಎಲ್ಲ ಸಮಸ್ಯೆಗಳಿಗೂ ಪರಿಹಾರವಿದೆಯೆಂಬ ಹಠಮಾರಿ ಧೋರಣೆಯನ್ನು ಹೊಂದುತ್ತಾರೆ. ಅನ್ಯಸಿದ್ಧಾಂತ ಮತ್ತು ಆಲೋಚನಾ ವಿಧಾನಗಳನ್ನು ನಿಕೃಷ್ಟವಾಗಿ ಕಾಣತೊಡಗುತ್ತಾರೆ. ಏಕೆಂದರೆ ಅವರು ಪ್ರತಿನಿಧಿಸುವ ಸಿದ್ಧಾಂತವು, ಅದರ ಮೂಲ ಪುರುಷನಲ್ಲಿ ಇದ್ದ ವ್ಯಕ್ತಿ ವಿಶೇಷತೆಯಾಗಲೀ, ಅಪಾರವಾದ ಮಾನವ ಪ್ರೀತಿಯಾಗಲೀ ಇರುವುದಿಲ್ಲ. ಅದರ ಬದಲು ಸಾಂಸ್ಥಿಕ ಸ್ವರೂಪ ತಂದುಕೊಟ್ಟಿರುವ ಸ್ಥಾನಬಲದ ಆಹಂಕಾರವಿರುತ್ತದೆ. ಈ ಆಹಂಕಾರವೇ ಮುಂದಿನ ಎಲ್ಲ ಅನಾಹುತ ಪರಂಪರೆಗೆ ನಾಂದಿಯಾಗುತ್ತದೆ.

ಆಧುನಿಕ ಯುಗದಲ್ಲೂ ಇಂಥ ಶಕ್ತಿವಿಶೇಷಗಳು ಅಪಾರವಾಗಿವೆ. ನಮ್ಮಲ್ಲಿಯೇ ಧಾರವಾಡದಲ್ಲಿ ಬೇಂದ್ರೆ, ಕರಾವಳಿಯಲ್ಲಿ ಶಿವರಾಮ ಕಾರಂತರು, ದಕ್ಷಿಣದಲ್ಲಿ ಕುವೆಂಪು ನಮ್ಮ ಸಾಂಸ್ಕೃತಿಕ ಲೋಕದ ಶಕ್ತಿ ಕೇಂದ್ರಗಳಾಗಿ ಕಾರ್ಯ ನಿರ್ವಹಿಸಿದ್ದು ಈಗ ಚರಿತ್ರೆ. ಸ್ವತಂತ್ರ ಪೂರ್ವದಲ್ಲಿ ಗಾಂಧೀಜಿ, ಸ್ವತಂತ್ರ ಭಾರತದಲ್ಲಿ ಲೋಹಿಯಾ, ಅಂಬೇಡ್ಕರ್, ಜೆಡ್ಡು, ರಜನೀಶ್ ಇಂಥವರೆಲ್ಲ ಶಕ್ತಿಕೇಂದ್ರಗಳಾಗಿ ಕೆಲಸ ಮಾಡಿ ನಮ್ಮ ಬೌದ್ಧಿಕ ವಿಕಾಸಕ್ಕೆ ಕಾರಣರಾಗಿದ್ದಾರೆ. ಇವರೆಲ್ಲರೂ ಆತ್ಮಾಭಿಮಾನಿಗಳೂ ಮಾನವ ಪ್ರೇಮಿಗಳೂ ನಿಗರ್ವಿಗಳೂ ಆಗಿದ್ದರು. ಅವರಲ್ಲಿದ್ದ ನಿಗರ್ವವೇ ಅವರ ಅಪಾರ ಶಕ್ತಿಯೆಂಬುದನ್ನು ಮರೆಯುವಂತಿಲ್ಲ.

ಇಂದು ಈ ನಿಗರ್ವದ ವ್ಯಕ್ತಿಗಳು ವಿರಳರಾಗುತ್ತಿದ್ದಾರೆ. ಅದರಲ್ಲೂ ಪ್ರತಿಯೊಂದು ಜಾತಿ/ಧರ್ಮವೂ ಶಕ್ತಿ ಕೇಂದ್ರಗಳೆಂದು ತಮ್ಮನ್ನು ತಾವು ಕರೆದುಕೊಂಡು ಅಹಂಕಾರ ಕೇಂದ್ರಗಳಾಗಿ, ಸ್ವಾರ್ಥದ ಗುಂಪುಗಳಾಗಿ ರೂಪುಗೊಳ್ಳುತ್ತಿವೆ. ಹಾಗಾದರೆ ಚರಿತ್ರೆಯಿಂದ ನಾವೇನು ಕಲಿತೇ ಇಲ್ಲವೆ?!

**ಶಿಕಾಕು**

## ಮಾತೇ ಮುತ್ತು

★ ಹಲ್ಲುಗಳು ಯಾವುದನ್ನು ಅಗಿಯುತ್ತವೆಯೋ ಅವುಗಳ ರುಚಿಯನ್ನು ನಾಲಿಗೆ ಅನುಭವಿಸುತ್ತದೆ! ಸತ್ಪುರುಷರು ಸ್ವಾಭಾವಿಕವಾಗಿ ಬೇರೆಯವರ ಹಿತಕ್ಕಾಗಿ ಕಷ್ಟ ಪಡುತ್ತಾರೆ.

–ಸುಭಾಷಿತ

★ ಯಾರು ಈ ಲೋಕದಲ್ಲಿ ಅತ್ಯಂತ ಮೂಢರೋ, ಯಾರು ಅತ್ಯಂತ ಬುದ್ಧಿಶಾಲಿಗಳೋ ಅವರು ಸುಖವಾಗಿರುತ್ತಾರೆ! ಮಧ್ಯಮ ದರ್ಜೆಯವರು ಕಷ್ಟಪಡುತ್ತಾರೆ!

–ಮಹಾಭಾರತ

★ ದುರಾಸೆಯಿದ್ದ ಮೇಲೆ ದುರ್ಗುಣಗಳೇಕೆ? ಚಾಡಿಕೋರತನವಿದ್ದರೆ ಪಾತಕಗಳೇಕೆ? ಸತ್ಯವಿದ್ದ ಮೇಲೆ ತಪಸ್ಸು ಏಕೆ? ನಿಷ್ಕಲ್ಮಷವಾದ ಮನಸ್ಸಿದ್ದ ಮೇಲೆ ತೀರ್ಥಯಾತ್ರೆ ಏಕೆ? ಸೌಜನ್ಯವಿದ್ದ ಮೇಲೆ ಸ್ವಜನರೇತಕ್ಕೆ? ನಿಜವಾದ ಮಹಿಮೆ ಇದ್ದ ಮೇಲೆ ಒಡವೆಗಳೇಕೆ? ಒಳ್ಳೆಯ ವಿದ್ಯೆಯಿದ್ದ ಮೇಲೆ ಹಣ ಏತಕ್ಕೆ?

–ನೀತಿ ಶತಕ

★ ಗಂಡಸಿಗೆ ಅವನದೇ ಯೋಚನೆ ಇದೆ; ಆದರೆ ಹೆಂಗಸಿಗೆ ಅವಳದೇ ಆದ ದಾರಿ ಇದೆ.

–ಆಲಿವರ್ ವೆಂಡಲ್ ಹೋಂಸ್

★ ಬರಿಯ ಹೆಣ್ ಬರಿಯ ಗಂಡೆಂಬುದಿಳೆಯೊಳಗಿಲ್ಲ, ಬೆರಕೆಯೆಲ್ಲರುಮರ್ಧನಾರೀಶನಂತೆ.

–ಡಿವಿಜಿ

★ ಹೆಣ್ಣಿಂದ ಮೇಲೆ ಬುದ್ಧಿ ಮೊಟಕು, ಆದ್ದರಿಂದಲೇ ಗಂಡು ಇಷ್ಟೆಲ್ಲಾ ಆಟ ಆಡೋದು.

–ಮಾಸ್ತಿ ವೆಂಕಟೇಶ ಅಯ್ಯಂಗಾರ್

★ ಹೆಂಗಸು ಗಂಡಸಿನೊಡನೆ ಸ್ಪರ್ಧಿಸುವವಳಲ್ಲ; ಅವನೊಡಗೂಡಿ ಪೂರ್ಣತೆ ಉಂಟು ಮಾಡುವವಳು.

–ರವೀಂದ್ರನಾಥ ಠಾಕೂರ್

★ ನಮ್ಮ ಮನಸ್ಸು, ಬುದ್ಧಿ, ಉದ್ವೇಗ– ಕಲೆ ಹೊರಹೊಮ್ಮಲು ಕಾರಣ.

–ಆರ್.ಎಂ.ಹಡಪದ

★ ಸೌದೆ ಮುಗಿದರೆ ಒಲೆ ಆರುತ್ತದೆ; ಚಾಡಿಕೋರರನ್ನು ದೂರವಿಟ್ಟರೆ ಜಗಳ ದೂರವಾಗುತ್ತದೆ.

–ಜಪಾನ್ ಗಾದೆ

★ ಕೆಲವರು ಘನವಂತರಾಗಿಯೇ ಹುಟ್ಟುತ್ತಾರೆ; ಮತ್ತೆ ಕೆಲವರು ಕಷ್ಟಪಟ್ಟು ಘನವಂತರಾಗುತ್ತಾರೆ; ಹಲವರ ಮೇಲೆ ಘನತೆ ತಾನಾಗಿಯೇ ಬಂದು ಕೂರುತ್ತದೆ.

–ವಿಲಿಯಂ ಶೇಕ್ಸ್‌ಪಿಯರ್

★ ನಿಮ್ಮ ದೇಹ, ಮನಸ್ಸು, ಬುದ್ಧಿಯನ್ನು ಬಲಹೀನಗೊಳಿಸುವ ಎಲ್ಲವನ್ನೂ ವಿಷವೆಂದು ದೂರಮಾಡಿ.

–ಸ್ವಾಮಿ ವಿವೇಕಾನಂದ

★ ಸದಾಕಾಲ ದುಡಿಮೆ ಮಾಡುತ್ತಿರುವುದು, ಸದಾಕಾಲ ಸಂತೋಷವಾಗಿರುವುದರ ರಹಸ್ಯ.

–ಬರೋಸ್

★ ಎಲ್ಲಿ ಸದ್ಗುಣವಿರುವುದೋ ಅಲ್ಲಿ ನಮ್ರತೆಯ ಅಭಾವವಾಗಲೀ, ಸವಿಮಾತುಗಳ ಅಭಾವವಾಗಲೀ ಕಂಡು ಬರುವುದಿಲ್ಲ.

–ಕನ್‌ಫ್ಯೂಷಿಯಸ್

★ ಕೋಪವು ಮೂರ್ಖತನದಿಂದ ಆರಂಭವಾಗುತ್ತದೆ; ಪಶ್ಚಾತ್ತಾಪದಲ್ಲಿ ಕೊನೆಗೊಳ್ಳುತ್ತದೆ.

–ಲೋಕೋಕ್ತಿ